
# ಹಸು ಹೇಳಿದ ಹಾಲಿನ ಕಥೆ



ಉತ್ಪಾದಕರ ಸ್ಥಳದಲ್ಲಿ
ಶುದ್ಧ ಹಾಲಿನ ಉತ್ಪಾದನೆ

ಗುಣಮಟ್ಟ ಹಾಗೂ ಸ್ವಾಧರ ನಿರ್ವಹಣೆ

ನ್ಯಾಶನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್

ಆನಂದ್

# ಪ್ರಸ್ತಾವನೆ

ಮನೆಯಲ್ಲಿ ಹಾಲು ಕರೆಯುವ ಹಸು ಅಥವಾ ಎಮ್ಮೆಯನ್ನು ಕಟ್ಟಿಕೊಂಡು ಹಾಲನ್ನು ಸಹಕಾರಿ ಸಂಘಕ್ಕೆ ಪೂರೈಸಿದ ಮಾತ್ರಕ್ಕೆ ನಮ್ಮ ಜವಾಬ್ದಾರಿ ಕೊನೆಗೊಳ್ಳುವುದಿಲ್ಲ. ಇಂದು, ನಮ್ಮ ದೇಶ ಹಾಲಿನ ಉತ್ಪಾದನೆಯಲ್ಲಿ ವಿಶ್ವದಲ್ಲೆ ಪ್ರಥಮ ಸ್ಥಾನವನ್ನು ತಲುಪಿದೆ. ಆದರೆ ಬದಲಾಗುತ್ತಿರುವ ಪರಿಸ್ಥಿತಿಗಳಲ್ಲಿ ಹಾಲು ಶುದ್ಧವಾಗಿರುವುದು, ಬೇಗನೆ ಹಾಳಾಗದಿರುವುದು ಹಾಗೂ ರೋಗ ಹರಡದಿರುವುದರ ಬಗ್ಗೆ ಕಾಳಜಿ ಅಗತ್ಯವಾಗಿದೆ. ಇಂತಹ ಸ್ವಚ್ಛ ಹಾಲಿನಿಂದ ಉತ್ತಮೋತ್ತಮ ಉತ್ಪನ್ನಗಳು ತಯಾರಾದಲ್ಲಿ ನಮಗೂ ನಮ್ಮ ಡೈರಿಗೂ ಲಾಭದಾಯಕವಾಗಲಿದೆ. ಈ ನಿಟ್ಟಿನಲ್ಲಿ, ನಾವು ಬಹಳಷ್ಟು ಸುಧಾರಣೆಗಳನ್ನು ಮಾಡಬಹುದಾಗಿದೆ. ಉದಾಹರಣೆಗೆ :

(1) ಹಸುವನ್ನು ಸ್ವಚ್ಛ ಹಾಗೂ ರೋಗರಹಿತವಾಗಿರಿಸುವುದು.

(2) ಹಸುವಿನ ಕೊಟ್ಟಿಗೆಯನ್ನು ಸ್ವಚ್ಛವಾಗಿರಿಸಿಕೊಳ್ಳುವುದು.

(3) ಅದಕ್ಕೆ ಸ್ವಚ್ಛ ಕುಡಿಯುವ ನೀರನ್ನು ನೀಡುವುದು.

(4) ಹಾಲು ಕರೆಯಲು ಮತ್ತು ಶೇಖರಿಸಲು ಸ್ಟೇನ್‌ಲೆಸ್ ಸ್ಟೀಲ್‌ನ ಸ್ವಚ್ಛ ಪಾತ್ರೆಗಳನ್ನು ಉಪಯೋಗಿಸುವುದು.

(5) ಹಾಲು ಕರೆಯುವ ಮುನ್ನ ಸಾಬೂನಿನಿಂದ ಕೈ ತೊಳೆದುಕೊಳ್ಳುವುದು.

(6) ಕೆಚ್ಚಲನ್ನು ಸ್ವಚ್ಛ ನೀರಿನಿಂದ ತೊಳೆದು ಒಗೆದ ಶುಭ್ರ ಬಟ್ಟೆಯಿಂದ ಒರಸುವುದು.

(7) ಹಾಲು ಕರೆಯುವ ಮುನ್ನ ಪ್ರತೀ ಮೊಲೆತೊಟ್ಟಿನಿಂದ ಒಂದೆರಡು ಧಾರೆ ಹಾಲನ್ನು ಹೊರಚೆಲ್ಲುವುದು.

(8) ಹಾಲು ಕರೆಯುವ ವ್ಯಕ್ತಿ ಚೊಕ್ಕಟವಾಗಿರಬೇಕು; ಅವರು ಹಾಲು ಕರೆಯುವಾಗ ಬೀಡಿ, ತಂಬಾಕು, ವೀಳ್ಯದೆಲೆ ಇತ್ಯಾದಿಗಳ ಸೇವನೆಯನ್ನು ಮಾಡುತ್ತಿರಬಾರದು.

(9) ಹಾಲು ಕರೆಯುವ ಸಮಯದಲ್ಲಿ ಹಸುವಿಗೆ ಹಸಿರು ಹುಲ್ಲನ್ನು ಮಾತ್ರ ತಿನ್ನಿಸಬಹುದು.

(10) ಹಾಲು ಕರೆದ ನಂತರ ಕೆಚ್ಚಲನ್ನು ಸ್ವಚ್ಛ ನೀರಿನಿಂದ ತೊಳೆಯಬೇಕು ಹಾಗೂ ಕ್ರಿಮಿನಾಶಕ ಮಿಶ್ರಣದಲ್ಲಿ ಮುಳುಗಿಸಬೇಕು. ಈ ಮೂಲಕ ಅವು ಕೆಚ್ಚಲ ರೋಗದಿಂದ ಪಾರಾಗುತ್ತವೆ.

(11) ಹಾಲಿನ ಪಾತ್ರೆಗೆ ಸರಿಯಾದ ಮುಚ್ಚಳ ಹಾಕಿಕೊಂಡು ಸಮಿತಿಗೆ ಬೇಗನೆ ತಲುಪಿಸಬೇಕು.

(12) ಸಂಘದಲ್ಲಿ, ಸಾಧ್ಯವಿದ್ದಲ್ಲಿ ಹಾಲನ್ನು ತಣ್ಣಗಿರಿಸಬೇಕು; ಇದರಿಂದ ಹಾಲು ಹಾಳಾಗುವುದಿಲ್ಲ.

ಈ ಎಲ್ಲ ವಿಷಯಗಳನ್ನು ನಾವು ಕಾರ್ಯಗತಗೊಳಿಸಿದಲ್ಲಿ ಸಮಿತಿಗೆ ತಲುಪಿಸಿದ ಹಾಲಿನಿಂದ ನಮ್ಮೆಲ್ಲರಿಗೂ ಬಹಳಷ್ಟು ಲಾಭವಾಗಬಹುದು. ಬನ್ನಿರಿ, ನಾವು ನಮ್ಮನ್ನು ಶುದ್ಧ ಹಾಲಿನ ಉತ್ಪಾದನೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳೋಣ.


ಮುಖ್ಯ ವ್ಯವಸ್ಥಾಪಕರು
(ಗುಣಮಟ್ಟ ಹಾಗೂ ಸ್ಥಾವರ ನಿರ್ವಹಣೆ)
ನ್ಯಾಶನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್
ಆನಂದ್-388 001.

# ಹಸು ಹೇಳಿದ ಹಾಲಿನ ಕಥೆ

ರಾಜನಗರ ಎಂಬ ಹಳ್ಳಿಯಲ್ಲಿ ಬನವಾರಿಯೆಂಬ ಗೌಳಿಗನಿದ್ದ. ಅವನಿಗೆ ಎರಡು ಮುದ್ದಾದ ಮಕ್ಕಳಿದ್ದವು, ರಾಧಾ ಅವನ ಪ್ರೀತಿಯ ಹೆಂಡತಿಯಾಗಿದ್ದಳು. ಬನವಾರಿಯ ಕುಟುಂಬ ಸುಖ, ಸಂತೋಷದಿಂದ ಬಾಳುತ್ತಿತ್ತು. ಏಕೆಂದರೆ ಅವರ ಹಸು ಗಂಗೆ ಮತ್ತು ಎಮ್ಮೆ ಜಮುನೆ ಸಾಕಷ್ಟು ಹಾಲನ್ನು ನೀಡುತ್ತಿದ್ದವು. ಬನವಾರಿ, ಗಂಗೆ ಮತ್ತು ಜಮುನೆಯರ ಹಾಲನ್ನು ತನ್ನ ಹಳ್ಳಿಯ ಸಹಕಾರಿ ಹಾಲು ಸಂಘಕ್ಕೆ ನೀಡುತ್ತಿದ್ದ. ಸಂಘಕ್ಕೆ ಹಾಲು ನೀಡುವ ಮೂಲಕ ಬನವಾರಿ ಸಾಕಷ್ಟು ಆದಾಯ ಗಳಿಸುತ್ತಿದ್ದ ಹಾಗೂ ಅವನ ಮನೆಯಲ್ಲಿ ಯಾವುದೇ ವಸ್ತುವಿನ ಕೊರತೆಯಿರಲಿಲ್ಲ. ಅವರ ಊಟ, ತಿಂಡಿಗಳು ಸಮೃದ್ಧವಾಗಿದ್ದವು, ಮಕ್ಕಳೂ ಹಾಗು ಇತರರೂ ಕೂಡಿ ಸಂತೋಷದಿಂದ ಹಬ್ಬ, ಹರಿದಿನಗಳನ್ನು ಆಚರಿಸುತ್ತಿದ್ದರು ಬನವಾರಿ ತನ್ನನ್ನು ಭಾಗ್ಯಶಾಲಿ ಎಂದು ಪರಿಗಣಿಸಿದ್ದ, ಏಕೆಂದರೆ ಅವನ ಬಳಿ ಗಂಗೆಯಂತಹ ಆಕಳು ಮತ್ತು ಜಮುನೆಯಂತಹ ಎಮ್ಮೆಯಿದ್ದವು. ರಾಧಾ ಮತ್ತು ಮಕ್ಕಳು ಕೂಡ ಗಂಗೆ ಮತ್ತು ಜಮುನೆಯರನ್ನು ತುಂಬ ಪ್ರೀತಿಸುತ್ತಿದ್ದರು. ಆದರೆ ಅನಿರೀಕ್ಷಿತವಾಗಿ ಈ ಸುಖಸಂಸಾರದಲ್ಲಿ ದುಃಖದ ಕಾರ್ಮೋಡಗಳು ಕವಿಯತೊಡಗಿದವು. ಗಂಗೆ ಅದ್ಯಾವುದೋ ರೋಗದಿಂದ ನರಳತೊಡಗಿತ್ತು. ಬನವಾರಿ ಮನೆಯಲ್ಲೆ ಅದಕ್ಕೆ ಔಷದೋಪಚಾರ ನಡೆಸಿದ, ಆದರೆ ಯಾವುದೇ ಗುಣ ಕಾಣಲಿಲ್ಲ. ಗಂಗೆ ಕಡಿಮೆ ಹಾಗೂ ಅಶುದ್ಧ ಹಾಲು ನೀಡತೊಡಗಿತು. ಬನವಾರಿಯ ಆದಾಯ ಕಡಿಮೆಯಾಗಿ ಮನೆಯಲ್ಲಿ ತರತರಹದ ಸಂಕಷ್ಟಗಳು ಎದುರಾಗತೊಡಗಿದವು. ರಾಧಾ ಬೇಡವೆಂದು ಅದೆಷ್ಟು ಕೇಳಿಕೊಂಡರೂ, ಮನೆಯ ಸಂಕಷ್ಟಗಳಿಗೆ



ಬನವಾರಿಯ ಸುಖಸಂಸಾರ



ರೋಗಗ್ರಸ್ತ ಗಂಗೆ, ಚಿಂತಿತ ಪರಿವಾರ, ಕುಂಠಿತ ಆದಾಯ


ಬೇಸತ್ತು ಬನವಾರಿ ಗಂಗೆಯನ್ನು ಮಾರಿಬಿಡಲು ನಿರ್ಧರಿಸಿದ.ಅದೇ ಸಮಯದಲ್ಲಿ ಸಮೀಪದ ಹಳ್ಳಿಯಲ್ಲಿ ಜಾನುವಾರುಗಳ ಜಾತ್ರೆ ನಡೆದಿತ್ತು. ಬನವಾರಿ ಆ ಜಾತ್ರೆಯಲ್ಲಿ ಗಂಗೆಯನ್ನು ಮಾರಿ ಬೇರೊಂದು ಆಕಳನ್ನು ತರಲು ನಿರ್ಧರಿಸಿದ.



ಗಂಗೆಯನ್ನು ಮಾರಲು ಬನವಾರಿ ಜಾತ್ರೆಯ ಸ್ಥಳಕ್ಕೆ ಹೋಗುತ್ತಿದ್ದಾನೆ

ಮರುದಿನ ಬನವಾರಿ ಗಂಗೆಯೊಡನೆ ಜಾತ್ರೆಗೆ ತೆರಳಲು ಸಿದ್ಧನಾದ. ರಾಧಾ ಮತ್ತು ಮಕ್ಕಳು ಗಂಗೆಯನ್ನಪ್ಪಿ ಅಳತೊಡಗಿದರು. ಬನವಾರಿಯ ಕಣ್ಣುಗಳೂ ನೀರೂರಿದವು. ಆದರೆ ಅವನು ತನ್ನ ಹೃದಯವನ್ನು ಕಲ್ಲುಮಾಡಿಕೊಂಡು, ಮನೆಯವರನ್ನು ಸಮಾಧಾನಗೊಳಿಸಿ ಗಂಗೆಯೊಡನೆ ಜಾತ್ರೆಯ ದಾರಿಹಿಡಿದ.

ಅರ್ಧ ದಾರಿ ಸವೆಸಿದ ನಂತರ ಬನವಾರಿ ದಣಿವಾರಿಸಿಕೊಳ್ಳಲು ಒಂದು ಮರದಡಿಯಲ್ಲಿ ಸ್ವಲ್ಪ ಹೊತ್ತು ಕುಳಿತ. ಅವನ ಮನಸ್ಸಲ್ಲೂ ವಿಷಾದ ತುಂಬಿತ್ತು. ಗಂಗೆಯ ಕಣ್ಣಾಲಿಗಳು ತುಂಬಿಬಂದದ್ದನ್ನು ಕಂಡು ಬನವಾರಿ ''ಗಂಗಾ, ನನ್ನನ್ನು ಕ್ಷಮಿಸಿಬಿಡು'' ಅಂದ. ತನ್ನದೇ ಯೋಚನೆಗಳಲ್ಲಿ ಮುಳುಗಿದ್ದ ಬನವಾರಿ ''ಅಣ್ಣಾ'' ಎಂಬ ಕರೆ ಕೇಳಿ ಹಿಂತಿರುಗಿ ನೋಡಿದರೆ ಗಂಗೆ ಹಸು ಅವನೊಂದಿಗೆ ಮಾತನಾಡುತ್ತಿತ್ತು: ''ಅಣ್ಣಾ, ನನ್ನನ್ನು ನಿನ್ನ ಕುಟುಂಬದಿಂದ ದೂರ ಮಾಡಬೇಡ, ನನ್ನನ್ನು ಮಾರಬೇಡಣ್ಣಾ.'' ಬನವಾರಿ ತನ್ನ ಕಿವಿಗಳನ್ನು ತಾನೇ ನಂಬದಾದ. ತಾನೆಲ್ಲೋ ಕನಸಿನಲ್ಲಿರುವಂತೆ ಅವನಿಗನಿಸಿತು. ಅದೇ ಯೋಚನೆಯಲ್ಲಿ ಅವನು ಗಂಗೆಯೊಂದಿಗೆ ಮಾತನಾಡ ತೊಡಗಿದ : ''ನಾನಾದ್ರೂ ಏನ್ಮಾಡ್ಲಿ ಗಂಗಾ ? ಇಕ್ಕಟ್ಟಿನಲ್ಲಿ ಸಿಲುಕಿದ್ದೇನೆ. ನಿನ್ನ ಹಾಲು ಕಡಿಮೆ ಮತ್ತು ಅಶುದ್ಧವಾಗಿರುವುದರಿಂದ ನಮ್ಮ ಆದಾಯವೂ ಕಡಿಮೆಯಾಗಿದೆ. ಆದಾಯ ಹೆಚ್ಚಿಸಲು ನಾನು ನಿನ್ನನ್ನು ಮಾರಿ ಬೇರೆ ಆಕಳನ್ನು ತರುವುದಾಗಿದೆ. ನನಗೂ ನಿನ್ನನ್ನು ಮಾರುವುದು ಅಷ್ಟು ಇಷ್ಟವಿಲ್ಲ. ಆದರೆ ನಿನಗೆ ತಗಲಿರುವ ಅದ್ಯಾವುದೋ ರೋಗದಿಂದ ನಿನ್ನ ಹಾಲು ಕಡಿಮೆಯಾಗಿರುವುದು ಮಾತ್ರವಲ್ಲದೆ ಅಶುದ್ಧವೂ ಆಗಿದೆ.''



ದಾರಿಯಲ್ಲಿ ಗಂಗೆ ಬನವಾರಿಯೊಂದಿಗೆ ಮಾತನಾಡತೊಡಗುತ್ತದೆ

''ಆದ್ರೆ, ಇದರಲ್ಲಿ ನನ್ನದಾದರೂ ಏನು ತಪ್ಪಿದೆ ?'' ಗಂಗೆ ಕೇಳಿತು,

''ಹಾಂ, ಗಂಗಾ ಎಲ್ಲವ್ರೂ ದೈವೇಚ್ಛೆ!'' ನಿಟ್ಟುಸಿರಿಡುತ್ತ ಬನವಾರಿ ಉತ್ತರಿಸಿದ. ''ಇದಕ್ಕೆ ದೈವೇಚ್ಛೆ ಅನ್ನುವುದಿಲ್ಲ. ನನ್ನನ್ನು ಕ್ಷಮಿಸಣ್ಣಾ ಆದ್ರೆ, ನಿಜ ಹೇಳ್ಬೇಕಂದ್ರೆ, ನೀನೂ ರಾಧಕ್ಕನೂ ತಪ್ಪಿತಸ್ಥರು. ನಿಮಗೆ ಜಾನುವಾರುಗಳ ಪಾಲನೆಯ ಬಗ್ಗೆ ಹೆಚ್ಚೇನೂ ತಿಳಿದಿಲ್ಲ.''

''ಗಂಗಾ ನಿನ್ನ ಮಾತಿನ ಅರ್ಥವಾದರೂ ಏನು ? ನಾವು ಅದೆಷ್ಟೋ ಪೀಳಿಗೆಗಳಿಂದ ಪಶುಗಳ ಪಾಲನೆ ನೋಡಿಕೊಳ್ಳುತ್ತಿರುವವರು'' ಆಶ್ಚರ್ಯದಿಂದ ಬನವಾರಿ ಕೇಳಿದ. ''ಇದನ್ನು ವಿವರಿಸಲು ನಾನು ನಿನಗೆ ಹಾಲಿನ ಕಥೆ ಹೇಳುತ್ತೇನೆ ಕೇಳು'' ಎಂದು ಗಂಗೆ ಹೇಳಿತು.

ಬನವಾರಿಗೇನೂ ಅರ್ಥವಾಗಲಿಲ್ಲ. ''ಹಾಲಿನ ಕಥೆಯೇ?'' ಅವನೆಂದ.

''ಹಾಂ, ಶುದ್ಧ ಹಾಗೂ ತಾಜಾ ಹಾಲು ಕರೆಯಲು ಮತ್ತು ಅದರ ಗುಣಮಟ್ಟ ಉಳಿಸಿಕೊಳ್ಳಲು ಜಾನುವಾರುಗಳನ್ನು ಹೇಗೆ ನೋಡಿಕೊಳ್ಳಬೇಕೆಂಬ ಕಥೆಯೇ ಹಾಲಿನ ಕಥೆ'' ಗಂಗೆ ಉತ್ತರಿಸಿತು.

''ಈ ಕಥೆ ನಿನಗೆ ಹೇಳಿದವರ್ಯ್ಯಾರು ?'' ಅಚ್ಚರಿಯಿಂದ ಬನವಾರಿ ಕೇಳಿದ.

''ಒಂದು ದಿನ ನಾನು ಮತ್ತು ಜಮುನೆ ಹಸಿರು ಹುಲ್ಲು ಮೇಯಲು ಹೊಲಗಳೆಡೆ ಹೋಗಿದ್ದೆವು. ಅಲ್ಲಿ ನಮಗೆ ಗೌರಿ ಮತ್ತು ಪಾರೊ ಎಂಬ ಎರಡು ಹಸುಗಳ ಮತ್ತು ಚಂಪಾ ಎಂಬ ಒಂದು ಎಮ್ಮೆಯ ಪರಿಚಯವಾಯ್ತು. ಅವುಗಳನ್ನು ಎಂದೂ ಯಾವುದೇ ದೊಡ್ಡ ರೋಗ ಬಾಧಿಸುವುದಿಲ್ಲ, ಅವುಗಳ ಹಾಲೂ ಅಶುದ್ಧವಾದದ್ದಿಲ್ಲ'' ಗಂಗಾ ಉತ್ತರಿಸಿದಳು.



ಗೌರಿ, ಚಂಪಾ, ಪಾರೊ, ಗಂಗೆ, ಜಮುನೆಯರಿಗೆ ಹಾಲಿನ ಕಥೆ ಹೇಳುತ್ತವೆ

''ಮುಂದೆ?''

''ಹಾಂ, ಅವುಗಳ ಒಡೆಯ ಡೈರಿವಿಜ್ಞಾನ ಓದಿಕೊಂಡಿದ್ದಾನೆ. ಗೌರಿ, ಚಂಪಾ ಮತ್ತು ಪಾರೊ ಕೂಡ ತಮ್ಮ ಜೀವನಶೈಲಿ ಮತ್ತು ಹಾಲು ಶುದ್ಧವಾಗಿರಿಸುವ ಬಗ್ಗೆ ಕೆಲವು ಕಿವಿಮಾತುಗಳನ್ನು ನನಗೆ ತಿಳಿಸಿದರು. ಅದನ್ನೇ ನಾನು ನಿನಗೆ ಹೇಳ್ತೇನೆ''.

''ಸರಿ, ಹೇಳು,'' ಬನವಾರಿ ಉಸುರಿದ.

ಪಾರೊ : ಗೆಳತಿಯರೇ, ನಿಮ್ಮ ಸಂಕಷ್ಟಗಳನ್ನು ಕಂಡು ನನಗೆ ಬೇಸರವಾಗುತ್ತಿದೆ. ನಾನೂ ನನ್ನ ಗೆಳತಿಯರಾದ ಗೌರಿ, ಚಂಪಾರವರು ನಿಮ್ಮ ಯಜಮಾನ ನಿಮ್ಮನ್ನೂ ಹಾಗು ನಿಮ್ಮ ಹಾಲನ್ನೂ ಯಾವ ರೀತಿಯಲ್ಲಿ ನೋಡಿಕೊಳ್ಳಬೇಕೆಂಬ ಬಗ್ಗೆ ತಿಳಿಸಲಿದ್ದೇವೆ.

ಚಂಪಾ : ನಮ್ಮ ಮಾತನ್ನು ಗಮನವಿಟ್ಟು ಕೇಳಿ, ನಿಮ್ಮ ಯಜಮಾನನಿಗೆ ತಿಳಿಸಿ. ನಾವು ತಿಳಿಸುವ ಉಪಾಯಗಳನ್ನು ಪರಿಪಾಲಿಸಿದಲ್ಲಿ ನೀವೆಂದೂ ರೋಗಗ್ರಸ್ತರಾಗಲಾರಿರಿ.

ಗೌರಿ : ಮಾತ್ರವಲ್ಲ, ನೀವು ಉತ್ತಮ ಹಾಲು ನೀಡಬಲ್ಲಿರಿ, ಈ ಮೂಲಕ ನಿಮ್ಮ ಯಜಮಾನನ ಆದಾಯವೂ ಮೊದಲಿಗಿಂತ ಹೆಚ್ಚಾಗುವುದು.

ಗಂಗಾ : ಹೇಳಕ್ಕಾ, ನಾವೂ ಅದನ್ನೇ ಬಯಸುತ್ತೇವೆ.


ಗೌರಿ : ಮೊದಲಾಗಿ ಹಾಲಿನ ವಿಷಯ. ಆಕಳು ಅಥವಾ ಎಮ್ಮೆ ಆರೋಗ್ಯದಿಂದಿದ್ದರೆ ಅವುಗಳ ಕೆಚ್ಚಲಿನಿಂದ ದೊರೆಯುವ ಹಾಲಿನಲ್ಲಿ ಯಾವುದೇ ದೋಷವಿರುವುದಿಲ್ಲ.

ಚಂಪಾ : ಹಾಲಿನ ಇದೇ ಗುಣಮಟ್ಟವನ್ನು ಉಳಿಸಿಕೊಳ್ಳಲು ಜಾನುವಾರು, ಅವುಗಳ ಕೊಟ್ಟಿಗೆ, ಜಾನುವಾರುಗಳ ಉಸ್ತುವಾರಿ ನೋಡಿಕೊಳ್ಳುವವರು, ಹಾಲು ಶೇಖರಿಸುವ ಪಾತ್ರೆಗಳು ಇತ್ಯಾದಿಗಳ ಸ್ವಚ್ಛತೆಯ ಕಡೆಗೆ ಹೆಚ್ಚು ಗಮನ ನೀಡುವುದು ಅಗತ್ಯ. ಇದರೊಂದಿಗೇ, ಹಾಲು ಕರೆದ ನಂತರ ಹಾಲನ್ನು ಸಂಘಕ್ಕೆ ಬೇಗನೆ ತಲುಪಿಸಬೇಕು. ಈ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳದಿದ್ದಲ್ಲಿ ಹಾಲಲ್ಲಿ ಸೂಕ್ಷ್ಮಾಣುಗಳ ಸಂಖ್ಯೆ ಹೆಚ್ಚುತ್ತದೆ ಹಾಗೂ ಹಾಲು ಹಾಳಾಗುತ್ತದೆ.

ಜಮುನಾ : ಸೂಕ್ಷ್ಮಾಣು? ನಾನಂತೂ ಹಾಲಲ್ಲಿ ಎಂದೂ ಸೂಕ್ಷ್ಮಾಣು ನೋಡೇ ಇಲ್ಲ.

ಉಳಿದವರೆಲ್ಲರೂ ಏಕಸ್ವರದಲ್ಲಿ : ನಿಜ, ನಾವೂ ಎಂದೂ ನೋಡೇ ಇಲ್ಲ.

ಪಾರೊ : ಏಕೆಂದರೆ, ಸೂಕ್ಷ್ಮಾಣುಗಳು ಬರಿಗಣ್ಣಿಗೆ ಕಾಣದಷ್ಟು ಚಿಕ್ಕದಾಗಿರುತ್ತವೆ. ಇವನ್ನು ಜೀವಾಣುಗಳೆಂದೂ ಕರೆಯಲಾಗುತ್ತದೆ. ಅವುಗಳನ್ನು ಕೇವಲ ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದಷ್ಟೇ ನೋಡಬಹುದಾಗಿದೆ. ಇವೇ ಜೀವಾಣುಗಳು ಹಾಲಿನ ಗುಣಮಟ್ಟವನ್ನು ಕಡಿಮೆಗೊಳಿಸುತ್ತವೆ.



ಜೀವಾಣು ನೋಡುವ ಸೂಕ್ಷ್ಮದರ್ಶಕ ಯಂತ್ರ

ಗಂಗಾ : ಅಂದರೆ ನೀನು ನೈರ್ಮಲ್ಯದ ಬಗ್ಗೆ ಹೇಳಿದ ಮಾತುಗಳನ್ನು ಪರಿಪಾಲಿಸುವುದರಿಂದ ಹಾಲು ಉತ್ತಮವಾಗುವುದೇ?

ಪಾರೊ : ನೀನು ಸರಿಯಾಗಿ ಹೇಳಿದಿ ನೋಡು. ಸ್ವಚ್ಛ ಹಾಗೂ ಆರೋಗ್ಯಪೂರ್ಣ ಆಕಳು ಅಥವಾ ಎಮ್ಮೆಯನ್ನು, ನಿರ್ಮಲ ವ್ಯಕ್ತಿ, ಸ್ವಚ್ಛ ಪಾತ್ರೆ ಬಳಸಿ ಹಾಲು ಕರೆದಲ್ಲಿ, ಸುತ್ತಮುತ್ತಲಿನ ಜಾಗ ಸ್ವಚ್ಛವಿದ್ದಲ್ಲಿ ಹಾಲಲ್ಲಿ ಜೀವಾಣುಗಳ ಸಂಖ್ಯೆ ಕಡಿಮೆಯಾಗುತ್ತದೆ. ಈ ಮೂಲಕ ಹಾಲಲ್ಲಿ ಕಸ, ಕಡ್ಡಿ, ಮಣ್ಣು, ನೊಣ ಇತ್ಯಾದಿಗಳು ಬರುವುದಿಲ್ಲ.

ಚಂಪಾ : ಅಲ್ಲದೆ ಅಂತಹ ಹಾಲನ್ನು ಸ್ಟೀಲಿನ ಪಾತ್ರೆಯಲ್ಲಿ ಸುರಿದು ಮುಚ್ಚಳ ಹಾಕಿ ಬೇಗನೆ ಸಂಘಕ್ಕೆ ತಲುಪಿಸಿದಲ್ಲಿ ಹಾಲಿನ ಗುಣಮಟ್ಟ ಹೆಚ್ಚು ಸಮಯದವರೆಗೆ ಉಳಿಯುತ್ತದೆ.

ಪಾರೊ : ಮೇಲೆ ಹೇಳಿದ ಮಾತುಗಳನ್ನು ಯೋಗ್ಯ ರೀತಿಯಲ್ಲಿ ಪಾಲಿಸದಿದ್ದಲ್ಲಿ ಡೈರಿಗೆ ತಲುಪುವಷ್ಟು ಹೊತ್ತಿನಲ್ಲಿ ಹಾಲಿನ ಹನಿಹನಿಯಲ್ಲೂ ಸಾವಿರಗಟ್ಟಲೆ, ಲಕ್ಷಗಟ್ಟಲೆ ಜೀವಾಣುಗಳು ವೃದ್ಧಿಸಬಹುದೆಂದರೆ ನಿಮಗೆಲ್ಲರಿಗೂ ಆಶ್ಚರ್ಯವಾಗಬಹುದು !

ಜಮುನಾ : ಅಬ್ಬಬ್ಬಾ !

ಗೌರಿ : ಹಾಂ, ಮತ್ತೆ ಈ ಜೀವಾಣುಗಳು ಪ್ರತೀ 15ರಿಂದ 20 ನಿಮಿಷಗಳಲ್ಲಿ ದ್ವಿಗುಣಗೊಳ್ಳುತ್ತಿರುವುದರಿಂದ ಹಾಲಿನ ಗುಣಮಟ್ಟ ಶೀಘ್ರವಾಗಿ ಕಡಿಮೆಗೊಳ್ಳುತ್ತದೆ.


ಜಮುನಾ : ಆದ್ರೆ ಸ್ವಚ್ಛ ಹಾಲಿನಿಂದ ನಮ್ಮ ಯಜಮಾನನಿಗೆ ಏನು ಲಾಭವಾಗಬಹುದು?

ಗೌರಿ : ಹಾಲು ಶುದ್ಧ ಹಾಗೂ ತಾಜಾ ಇದ್ದಲ್ಲಿ ಅದನ್ನು ಕುಡಿಯುವವರೆಲ್ಲರೂ ಆರೋಗ್ಯವಂತರಾಗಿರುತ್ತಾರೆ ಹಾಗೂ ಅವರು ಯಾವಾಗಲೂ ಅದೇ ಡೈರಿಯಿಂದ ಹಾಲು ಖರೀದಿಸುತ್ತಾರೆ.

ಚಂಪಾ : ಇಂತಹ ಹಾಲಿನಿಂದ ತಯಾರಿಸಲ್ಪಡುವ ತಿನಿಸುಗಳೂ ಉಚ್ಚ ಗುಣಮಟ್ಟ ಹೊಂದಿರುವುದು ಮಾತ್ರವಲ್ಲದೆ ಸ್ವಾದಿಷ್ಟವಾಗಿರುತ್ತವೆ. ಇಂತಹ ವಸ್ತುಗಳು ಬೇಗನೆ ಹಾಳಾಗುವುದಿಲ್ಲ. ಈ ಮೂಲಕ ಪಶುಪಾಲಕರು ಮತ್ತು ಡೈರಿ, ಈ ಎರಡೂ ಪಕ್ಷಗಳ ಆದಾಯ ಹೆಚ್ಚುವುದು.

ಗಂಗಾ : ಹಾಲನ್ನು ಹೇಗೆ ಶುದ್ಧವಾಗಿಡುವುದು ಎಂಬ ಬಗ್ಗೆ ತಿಳಿಸಕ್ಕಾ.

ಪಾರೊ : ಅದಕ್ಕಾಗಿ ಎಲ್ಲಕ್ಕಿಂತ ಮೊದಲು ಆಕಳು ಅಥವಾ ಎಮ್ಮೆಯ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಅದರ ಕೊಟ್ಟಿಗೆ ಸ್ವಚ್ಛ, ಶುಭ್ರವಾಗಿರಬೇಕು. ನಿನ್ನ ವಾಸ ಸ್ಥಳ ಯಾವುದು ?



ಸ್ವಚ್ಛ ಹಾಗೂ ರೋಗರಹಿತ ಪ್ರಾಣಿ


ಜಮುನಾ : ನಮ್ಮನ್ನು ಮನೆ ಮುಂದಿನ ಮರಕ್ಕೆ ಕಟ್ಟುತ್ತಾರೆ. ಮೂತ್ರ, ಗಂಜಲ, ಸೆಗಣಿಗಳಿಂದಾಗಿ ಮಲಗುವ ಸ್ಥಳ ಕೊಳಕಾಗಿರುತ್ತದೆ. ಅದನ್ನಾರ್ಯೂ ಸ್ವಚ್ಛಗೊಳಿಸುವುದೇ ಇಲ್ಲ. ನಾವು ಅಲ್ಲೇ ಬಿದ್ದಿರಬೇಕಾಗುತ್ತದೆ.

ಚಂಪಾ : ಪಶುಗಳನ್ನು ಕಟ್ಟುವ ಸ್ಥಳದಲ್ಲಿ ಮೇಲೆ ಚಾವಣಿ ಇರಬೇಕು. ಆ ಸ್ಥಳ ಗಾಳಿ-ಬೆಳಕಾಡುವಂತಿದ್ದು ಆರಾಮದಾಯಕವಾಗಿರಬೇಕು. ಅಲ್ಲದೆ ಕುಡಿಯಲು ಶುದ್ಧನೀರಿನ ವ್ಯವಸ್ಥೆ ಇರಬೇಕು.

ಗೌರಿ : ಆ ಸ್ಥಳ ಮತ್ತು ಅದರ ಸುತ್ತಮುತ್ತ ಸ್ವಚ್ಛತೆಯನ್ನು ಕಾಪಾಡಿಕೊಂಡಿರಬೇಕು. ಹಾಲು ಕರೆಯುವ ಸ್ಥಳದಲ್ಲಿ ಮೇವನ್ನು ರಾಶಿ ಹಾಕಿರಬಾರದು. ಆಕಳು ಅಥವಾ ಎಮ್ಮೆಯನ್ನು ಕಟ್ಟುವಲ್ಲಿ ಕನಿಷ್ಟ ಪಕ್ಷ ಮಣ್ಣಿನ ಸಾದಾ ನೆಲವಾದರೂ ಇರಬೇಕು. ಗಟ್ಟಿಯಾದ ನೆಲವಿದ್ದರೆ ಇನ್ನೂ ಒಳ್ಳೆಯದು.


ಗಂಗಾ : ಬೇರೆ ಇನ್ನೇನು ಮಾಡ್ಬೇಕು?

ಗೌರಿ : ಪ್ರಾಣಿಗಳನ್ನು ಕಟ್ಟುವ ಸ್ಥಳದಲ್ಲಿ ನೀರು ಅಥವಾ ಗಂಜಲ ಹೊರಗೆ ಅದಕ್ಕಾಗಿಯೇ ಇರುವ ಹೊಂಡಕ್ಕೆ ಹರಿದು ಹೋಗುವ ವ್ಯವಸ್ಥೆ ಇರಬೇಕು.



ಆಕಳು ಅಥವಾ ಎಮ್ಮೆ ಕಟ್ಟುವ ಸ್ಥಳ ಸ್ವಚ್ಛ-ಶುಭ್ರವಾಗಿರಬೇಕು ನೆಲ, ಗಟ್ಟಿ ಹಾಗೂ ಆರಾಮದಾಯಕವಾಗಿರಬೇಕು

ಪಾರೊ : ಸೆಗಣಿಯನ್ನು ಜಾನುವಾರು-ಗಳಿಂದ ದೂರದ ಗೊಬ್ಬರದ ಗುಂಡಿಯಲ್ಲಿ ಇಲ್ಲವೆ ಗೋಬರ್ ಗ್ಯಾಸ್ ಪ್ಲಾಂಟ್‌ನಲ್ಲಿ ಹಾಕಬೇಕು.




ಸೆಗಣಿಯನ್ನು ಜಾನುವಾರುಗಳಿಂದ ದೂರ ಗೊಬ್ಬರದ ಗುಂಡಿಯಲ್ಲಿ ಇಲ್ಲವೆ ಗೋಬರ್ ಗ್ಯಾಸ್ ಪ್ಲಾಂಟ್‌ನಲ್ಲಿ ಹಾಕಬೇಕು

ಇಷ್ಟು ಕಥೆ ಹೇಳಿ ಗಂಗಾ ಸುಮ್ಮನಾಯಿತು.

ಅದರ ಮಾತನ್ನು ಗಮನವಿಟ್ಟು ಕೇಳುತ್ತಿದ್ದ ಬನವಾರಿ ಮುಂದಿನ ಕಥೆಯನ್ನು ಕೇಳಲು ಉತ್ಸುಕನಾಗಿದ್ದ.

''ನನಗೆ ಪೂರ್ಣ ಕಥೆಯನ್ನು ಹೇಳು. ಪಾರೊ, ಗೌರಿ ಮತ್ತು ಚಂಪಾ ನಿನಗೆ ಇನ್ನ್ಯಾವ ಸಲಹೆ ಕೊಟ್ಟರು?'' ಬನವಾರಿ ಗಂಗಾಳನ್ನುದ್ದೇಶಿಸಿ ಕೇಳಿದ.

''ನನಗೆ ಅವರಿಂದ ಬಹಳಷ್ಟು ವಿಷಯಗಳು ತಿಳಿದವು. ಆದರೆ ಅವನ್ನೆಲ್ಲ ಇಲ್ಲೇ ಹೇಳುತ್ತ ಕೂತರೆ ಸಂಜೆಯಾದೀತು. ಮನೆಯಲ್ಲಿ ರಾಧಕ್ಕ ಮತ್ತು ಮಕ್ಕಳು ದಾರಿ ಕಾಯುತ್ತಿರಬಹುದು. ಮನೆಗೆ ಮರಳೋಣ. ದಾರಿಯಲ್ಲೇ ಉಳಿದ ಕಥೆ ಹೇಳ್ತೀನೆ'' ಗಂಗಾ ಉತ್ತರಿಸಿತು.




ಬನವಾರಿ ಗಂಗೆಯೊಂದಿಗೆ ಮನೆಗೆ ಮರಳುತ್ತಿದ್ದಾನೆ

ಬನವಾರಿಗೆ ಗಂಗಾಳ ಮಾತು ಸರಿಯೆನಿಸಿತು. ಅವನು ಹಗ್ಗ ಬಿಚ್ಚಿ, ಹಸುವಿನೊಂದಿಗೆ ಮನೆಯ ದಾರಿಹಿಡಿದ. ಸ್ವಲ್ಪ ದೂರ ಹೋಗುವಷ್ಟರಲ್ಲೆ ಅವನು ಏನನ್ನೋ ನೆನಪು ಮಾಡಿಕೊಂಡವನಂತೆ ಒಮ್ಮೆಲೆ ನಿಂತು ''ನಾವು ಜಾತ್ರೆಗಾಗಿ ಹೊರಟಿದ್ದೆವು ತಾನೆ?'' ಎಂದ.

ಮನೆಗೆ ಮರಳುವ ಉತ್ಸಾಹದಲ್ಲಿದ್ದ ಗಂಗಾ ಈ ಮಾತು ಕೇಳಿ ಕಳೆಗುಂದಿತು ''ಅಣ್ಣಾ, ನಾನು ಈ ಕಥೆ ನಿನಗೆ ಹೇಳಿದ ಉದ್ದೇಶವೆಂದರೆ, ನೀನು ನನ್ನನ್ನು ಸರಿಯಾಗಿ ನೋಡಿಕೊಂಡ್ರೆ, ನಾನೆಂದೂ ರೋಗಪೀಡಿತಳಾಗುವುದಿಲ್ಲ. ಆ ಮೂಲಕ ನಾನು ಹೆಚ್ಚು ಪ್ರಮಾಣದಲ್ಲಿ, ಶುದ್ಧ ಹಾಗೂ ಪೌಷ್ಟಿಕ ಹಾಲು ನೀಡಬಲ್ಲವಳಾಗುತ್ತೇನೆ. ನಿನ್ನ ಆದಾಯವೂ ಹೆಚ್ಚುತ್ತದೆ. ಇಷ್ಟಿದ್ದೂ ನೀನು ನನ್ನನ್ನು ಜಾತ್ರೆಯಲ್ಲಿ ಮಾರಬಯಸುತ್ತಿಯೇನು?''

ಬನವಾರಿ ಸ್ವಲ್ಪ ಹೊತ್ತು ಯೋಚಿಸಿದ ನಂತರ ಹೀಗೆಂದ : ''ಸರಿ, ನೀನು ಹೇಳಿದ ರೀತಿಯಲ್ಲಿ ನಿನ್ನ ಕಾಳಜಿವಹಿಸಿ ನೋಡುತ್ತೇವೆ. ನೀನು ಆರೋಗ್ಯವಂತಳಾದಲ್ಲಿ ಎಂದೆಂದೂ ನಮ್ಮೊಂದಿಗಿರುವೆಯಂತೆ. ಈಗ ... ಮುಂದಿನ ಕಥೆಯಷ್ಟು ಹೇಳಿಬಿಡು.''

ಗಂಗೆಯ ಮನಸ್ಸು ಮತ್ತೆ ಸಂತೋಷದಿಂದ ಕುಣಿದಾಡಿತು. ''ಅನಂತರ ಚಂಪಾ ಮತ್ತು ಪಾರೊ ಹಾಲು ಕರೆಯುವವರ ಬಗ್ಗೆ ತಿಳಿಸಿದರು'' ಎಂದು ಹೇಳುತ್ತ ಗಂಗೆ ಕಥೆಯನ್ನು ಮುಂದುವರಿಸಿತು.



ಹಾಲು ಕರೆಯುವ ವ್ಯಕ್ತಿ ಸ್ವಚ್ಛ, ಶುಭ್ರನಾಗಿರಬೇಕು

ಪಾರೊ: ಹಾಲು ಕರೆಯುವ ವ್ಯಕ್ತಿ ರೋಗ-ಗ್ರಸ್ತನಾಗಿದ್ದಲ್ಲಿ ಅದರ ಪರಿಣಾಮ ಹಾಲಿನ ಮೇಲೂ ಆಗುತ್ತದೆ.

ಚಂಪಾ : ಆದ್ದರಿಂದ ಯಾರಾದರೂ ಶೀತ, ಕೆಮ್ಮು, ಕ್ಷಯರೋಗ, ಚರ್ಮರೋಗ ಅಥವಾ ಸಾಂಕ್ರಾಮಿಕ ರೋಗದಿಂದ ಬಾಧಿತರಾಗಿದ್ದಲ್ಲಿ ಅಂಥವರು ಹಾಲು ಕರೆಯಬಾರದು.

ಪಾರೊ: ಗಾಯ, ಹುಣ್ಣು, ಬೊಕ್ಕೆಗಳು ತೆರೆದಿದ್ದಲ್ಲಿ, ಅಥವಾ ಕೈಗೇನಾದರೂ ಕೊಯ್ದಿದ್ದಲ್ಲಿ ಅಂಥವರು ಸೂಕ್ತ ಪಟ್ಟಿಗಳನ್ನು ಕಟ್ಟಿಕೊಳ್ಳದೆ ಹಾಲು ಕರೆಯಬಾರದು.

ಚಂಪಾ : ಹಾಲು ಕರೆಯುವ ವ್ಯಕ್ತಿ ಪರಿಶುಭ್ರನಾಗಿರಬೇಕು. ಅವರ ಬಟ್ಟೆ ಬರೆ ಒಗೆಯಲ್ಪಟ್ಟಿರಬೇಕು ಮತ್ತು ಸ್ವಚ್ಛವಾಗಿರಬೇಕು. ಹಾಲು ಕರೆಯುವಾಗ, ಹಾಲು ಕರೆಯುವವರಾಗಲೀ ಬಳಿಯಲ್ಲಿರುವವರಾಗಲೀ ಕೆಮ್ಮಬಾರದು, ಸೀನಬಾರದು. ಆ ಸಮಯದಲ್ಲಿ ಅಲ್ಲಿ ವೀಳ್ಯ, ತಂಬಾಕು, ಬೀಡಿ, ಪಾನ್‌ಮಸಾಲಾ ಇತ್ಯಾದಿಗಳ ಸೇವನೆ ಮಾಡಬಾರದು.

ಇದೆಲ್ಲವನ್ನು ಕೇಳಿಸಿಕೊಂಡ ನಂತರ ಬನವಾರಿ ಹೀಗೆಂದ : ''ನಿಜ, ಈ ಎಲ್ಲ ತಪ್ಪುಗಳನ್ನು ನಾವು ಮಾಡ್ತೀವಿ. ಇನ್ಮುಂದೆ ಹಾಲು ಕರೆಯುವಾಗ ಈ ವಿಷಯಗಳನ್ನು ನೆನಪಿನಲ್ಲಿ ಇಡ್ತೇವೆ ಗಂಗಾ.''


ಕಥೆ ಮುಗಿಯುವಷ್ಟರಲ್ಲಿ ಬನವಾರಿ ಮತ್ತು ಗಂಗೆ ಮನೆ ತಲುಪಿದ್ದರು. ಗಂಗೆ ಮನೆಗೆ ಮರಳಿದ್ದನ್ನು ಕಂಡು ರಾಧಾ ಮತ್ತು ಮಕ್ಕಳು ಬಹಳ ಆನಂದಿತರಾದರು. ''ಆಂ ! ಗಂಗಾಳನ್ನು ಮರಳಿ ತಂದಿರೇನು?'' ರಾಧಾ ಆಶ್ಚರ್ಯದಿಂದ ಕೇಳಿದಳು. ರಾತ್ರಿ ಊಟೋಪಚಾರ ಮುಗಿಸಿ ಮನೆಮಂದಿ ಮಲಗುವ ತಯಾರಿಯಲ್ಲಿದ್ದಾಗ ಬನವಾರಿ ರಾಧಾಳಿಗೆ, ಗಂಗಾ ಹೇಳಿದ ಹಾಲಿನ ಕಥೆ ಪುನರುಚ್ಚರಿಸಿದ. ಅದನ್ನು ಕೇಳಿ ರಾಧಾಳಿಗೆ ಆಶ್ಚರ್ಯವೂ ಸಂತೋಷವೂ ಏಕಕಾಲಕ್ಕೆ ಉಂಟಾದವು. ಮರುದಿನ ಬನವಾರಿ ಮತ್ತು ರಾಧಾ ಗಂಗೆಯ ಬಳಿ ಬಂದಾಗ ರಾಧಾ ಹೀಗೆಂದಳು : ''ಗಂಗಾ, ನೀನು ಹೇಳಿದ ಹಾಲಿನ ಕಥೆ ನನಗೂ ತಿಳಿಯಿತು. ಚಿಂತಿಸಬೇಡ, ಇನ್ಮುಂದೆ ನಾವು ನಿನ್ನನ್ನು ನಿನ್ನ ಗೆಳತಿಯರು ತಿಳಿಸಿಕೊಟ್ಟ ರೀತಿಯಲ್ಲೇ ನೋಡಿಕೊಳ್ಳುತ್ತೇವೆ.''

ಗಂಗೆಯ ಕಣ್ಣುಗಳಲ್ಲಿ ಆನಂದದ ಕಣ್ಣೀರು ತುಂಬಿದವು. ''ಅಕ್ಕಾ, ನಾನಂತೂ ಜೀವನವಿಡೀ ನಿಮ್ಮ ಸೇವೆ ಮಾಡಲು ಸಿದ್ಧಳಿದ್ದೇನೆ. ಆದರೆ ನೆನಪಿಡಬೇಕಾದ ಇನ್ನೂ ಅನೇಕ ವಿಷಯಗಳಿವೆ. ಅವುಗಳನ್ನು ಪಾಲಿಸಿದಲ್ಲಿ ನಾನು ಮತ್ತು ಜಮುನಾ ಆರೋಗ್ಯವಂತರಾಗಿ ಉಳಿದು ಶುದ್ಧ, ಪೌಷ್ಟಿಕ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಹಾಲು ನೀಡುವಂತಾಗುತ್ತೇವೆ.''

''ನಾನು ಇನ್ನೂ ಯಾವ್ಯಾವ ವಿಷಯಗಳನ್ನು ಗಮನದಲ್ಲಿಡಬೇಕಾಗಿದೆ?'' ರಾಧಾ ಪ್ರಶ್ನಿಸಿದಳು.


''ಮನೆಯಲ್ಲಿನ ನೊಣ ನಮ್ಮ ವೈರಿ. ಅವುಗಳ ಮೈಮೇಲೆ ಲಕ್ಷಾಂತರ ಜೀವಾಣುಗಳಿರುತ್ತವೆ. ಅವು ಅನೇಕ ರೋಗಗಳನ್ನು ಉಂಟುಮಾಡುತ್ತವೆ ಹಾಗೂ ಹಾಲನ್ನು ಹಾಳುಮಾಡುತ್ತವೆ'' ಗಂಗೆ ಉತ್ತರಿಸಿತು.

''ಹಾಂ, ಇದರರ್ಥ ನೊಣಗಳಿಂದ ಹಾಲನ್ನು ರಕ್ಷಿಸುವುದರ ಮೂಲಕವೂ ಹಾಲು ಶುದ್ಧವಾಗಿರುತ್ತದೆ ಎಂದು ತಾನೆ?'' ರಾಧಾ ಕೇಳಿದಳು.



ಒಂದು ನೊಣದ ಶರೀರದ ಮೇಲೆ ಸುಮಾರು ಹನ್ನೊಂದು ಲಕ್ಷ ಜೀವಾಣುಗಳಿರುತ್ತವೆ

ಗಂಗಾ : ಹಾಂ, ನೊಣ ಹಾಗೂ ಕೊಳೆ ಇವೆರಡರಿಂದಲೂ ಹಾಲನ್ನು ರಕ್ಷಿಸುವುದು ಅವಶ್ಯಕ. ಆಕಳು ಅಥವಾ ಎಮ್ಮೆ ಕೊಳಕಾಗಿದ್ದರೆ ಅದರ ಶರೀರದ ಮೇಲೆ ಕೋಟಿಗಟ್ಟಲೆ ಜೀವಾಣುಗಳಿರುತ್ತವೆ.



ಚಳಿಗಾಲದಲ್ಲಿ ಹಾಲು ಕರೆಯುವ ಮೊದಲು, ಪ್ರಾಣಿಗಳನ್ನು ಶುದ್ಧವಾದ ಬ್ರಶ್‌ನಿಂದ ಉಜ್ಜಿ ಸ್ವಚ್ಛಗೊಳಿಸಬೇಕು ಹಾಗೂ ಬೇಸಿಗೆಯಲ್ಲಿ ನೀರಿನಿಂದ ತೊಳೆಯಬೇಕು

ಆದ್ದರಿಂದ ಹಾಲು ಕರೆಯುವ ಮೊದಲು ಅವುಗಳನ್ನು ಸ್ವಚ್ಛಗೊಳಿಸುವುದು ಅಗತ್ಯ. ಬೇಸಿಗೆಯಲ್ಲಿ ಪ್ರಾಣಿಗಳನ್ನು ನೀರಿನಿಂದ ತೊಳೆಯಬೇಕು ಹಾಗೂ ಚಳಿಗಾಲದಲ್ಲಿ ಶುದ್ಧವಾದ ಬ್ರಶ್‌ನಿಂದ ಉಜ್ಜಿ ಸ್ವಚ್ಛಗೊಳಿಸಬೇಕು. ಈ ಮೂಲಕ ಕೂದಲು ಮತ್ತು ಶರೀರದ ಮೇಲಿರುವ ಜೀವಾಣುಗಳನ್ನು ದೂರಗೊಳಿಸಬಹುದು.


ರಾಧಾ : ಸರಿ ! ಈ ಮಾತನ್ನು ನೆನಪಿನಲ್ಲಿಡುತ್ತೇನೆ.

ಗಂಗಾ : ಹಾಲು ಶುದ್ಧವಾಗಿರಲು ಪಾತ್ರೆ ಕೂಡ ಸ್ವಚ್ಛವಾಗಿರಬೇಕು. ಹಾಲಿನ ಪಾತ್ರೆಯನ್ನು ಸಾಬೂನಿನಿಂದ ತೊಳೆದುಕೊಳ್ಳಬೇಕು. ಪಾತ್ರೆಯಲ್ಲಿ ಮಣ್ಣು-ಕೊಳೆ ಇಲ್ಲವೆಂಬ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ತೊಳೆದ ನಂತರ ಕೂಡಲೆ ಅದನ್ನು ಒಣಗಿಸಲು ಸ್ವಚ್ಛ ಸ್ಥಳದಲ್ಲಿ ಬೋರಲು ಹಾಕಬೇಕು.

ರಾಧಾ : ಸರಿ.

ಗಂಗಾ : ಆಕಳು ಮತ್ತು ಎಮ್ಮೆಯ ಕೆಚ್ಚಲನ್ನು ಸ್ವಚ್ಛ ನೀರಿನಿಂದ ತೊಳೆದು ಒಗೆದ ಸ್ವಚ್ಛ ಬಟ್ಟೆಯಿಂದ ಒರಸಬೇಕು.

ರಾಧಾ : ನಾನಂತೂ ಮೊದಲಿನಿಂದಲೇ ಹಾಗೆ ಮಾಡ್ತಿದ್ದೇನೆ.




ಆಕಳು ಮತ್ತು ಎಮ್ಮೆಯ ಕೆಚ್ಚಲಿನ ಪ್ರತಿ ಮೊಲೆತೊಟ್ಟನ್ನೂ ಸ್ವಚ್ಛ ನೀರಿನಿಂದ ತೊಳೆದು ಒಗೆದ ಸ್ವಚ್ಛ ಬಟ್ಟೆಯಿಂದ ಒರಸಬೇಕು

ಗಂಗಾ : ನೀನು, ನಿನ್ನ ಸೆರಗಿನಿಂದ ನಮ್ಮ ಕೆಚ್ಚಲನ್ನು ಒರಸುತ್ತಿ. ಅದು ಸ್ವಚ್ಛವಿಲ್ಲದಿರಬಹುದು. ಇದಕ್ಕಾಗಿ ಸ್ವಚ್ಛ ಬಟ್ಟೆಯ ಬಳಕೆ ಆಗತ್ಯ. ಹಾಲು ಕರೆಯುವಾಗ ಆರಂಭದಲ್ಲಿ ಪ್ರತೀ ಮೊಲೆತೊಟ್ಟಿನಿಂದಲೂ ಒಂದೆರಡು ಧಾರೆ ಹಾಲನ್ನು ಹೊರಚೆಲ್ಲಬೇಕು. ಇದರಿಂದ ಕೆಚ್ಚಲಲ್ಲಿರುವ ಜೀವಾಣುಗಳು ಹೊರದಬ್ಬಲ್ಪಡುತ್ತವೆ.



ಹಾಲು ಕರೆಯುವಾಗ ಆರಂಭದಲ್ಲಿ ಪ್ರತೀ ಮೊಲೆತೊಟ್ಟಿನಿಂದಲೂ ಒಂದೆರಡು ಧಾರೆ, ಹಾಲನ್ನು ಹೊರಚೆಲ್ಲಬೇಕು

ಹಾಲು ಕರೆಯುವ ಮೊದಲು ಕೈಗಳನ್ನು ಸಾಬೂನಿನಿಂದ' ತೊಳೆದುಕೊಳ್ಳಬೇಕು.




ಹಾಲು ಕರೆಯುವ ಮೊದಲು ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳಬೇಕು

ಹಾಲು ಕರೆಯುವ ವ್ಯಕ್ತಿ ಎಂದೂ ತನ್ನ ಬೆರಳುಗಳನ್ನು ಹಾಲಲ್ಲಿ ಮುಳುಗಿಸಬಾರದು ಹಾಗೂ ಆಕಳು ಅಥವಾ ಎಮ್ಮೆಯ ಕೆಚ್ಚಲಿಗೆ ಎಣ್ಣೆ ಸವರಬಾರದು.




ಬೆರಳುಗಳನ್ನು ಹಾಲಲ್ಲಿ ಅದ್ದಬಾರದು

ಹಾಲು ಕರೆಯುವಾಗ ತಮ್ಮ ಶರೀರದ ಯಾವುದೇ ಅಂಗ ಅಥವಾ ಬಟ್ಟೆ, ಹಾಲಿಗಾಗಲೀ ಹಾಲು ಕರೆಯುವ ಪಾತ್ರೆಗಾಗಲೀ ತಗಲದಂತೆ ಎಚ್ಚರವಹಿಸಬೇಕು.

ಬನವಾರಿ : ಸರಿ !

ಗಂಗಾ : ಕೆಚ್ಚಲಲ್ಲಿ ಸ್ವಲ್ಪವೂ ಹಾಲು ಬಾಕಿಯುಳಿಯದಂತೆ ಜಾಗ್ರತೆ ವಹಿಸಬೇಕು, ಏಕೆಂದರೆ ಹಾಲು ಬಾಕಿಯುಳಿದಲ್ಲಿ ಕೆಚ್ಚಲಲ್ಲಿ ಜೀವಾಣುಗಳು ಶೀಘ್ರವಾಗಿ ವೃದ್ಧಿಸುತ್ತವೆ. ಇದರಿಂದ ಪಶುವಿಗೆ ರೋಗವುಂಟಾಗುವ ಸಾಧ್ಯತೆ ಹೆಚ್ಚುತ್ತದೆ.


ಹಾಲು ಕರೆದಾದ ನಂತರ ಕೆಚ್ಚಲನ್ನು ಸ್ವಚ್ಛ ನೀರಿನಿಂದ ತೊಳೆಯಬೇಕು ಹಾಗೂ ಕ್ರಿಮಿನಾಶಕ (ಐಡೋಫೊರ್) ಮಿಶ್ರಣದಲ್ಲಿ ಮುಳುಗಿಸಬೇಕು.




ಹಾಲು ಕರೆದಾದ ನಂತರ ಕೆಚ್ಚಲನ್ನು ಸ್ವಚ್ಛ ನೀರಿನಿಂದ ತೊಳೆಯಬೇಕು ಹಾಗೂ ಕ್ರಿಮಿನಾಶಕ ಮಿಶ್ರಣದಲ್ಲಿ ಮುಳುಗಿಸಬೇಕು


ಬನವಾರಿ : ಸರಿ, ಇದನ್ನೂ ನೆನಪಿಟ್ಟುಕೊಳ್ಳುತ್ತೇವೆ.

ಗಂಗಾ : ಹಾಲು ಕರೆಯುವ ಪಾತ್ರೆ ಮತ್ತು ಸಂಘಕ್ಕೆ ಕೊಂಡೊಯ್ಯುವ ಪಾತ್ರೆಗಳು ಸ್ಟೇನ್‌ಲೆಸ್ ಸ್ಟೀಲ್‌ನದಾಗಿರಬೇಕು. ಪಾತ್ರೆಯೊಳಗೆ ನೊಣ, ಇನ್ನಿತರ ಕಶ್ಮಲಗಳು ಬೀಳದ ಹಾಗೆ ಪಾತ್ರೆಗೆ ಸರಿಯಾಗಿ ಮುಚ್ಚಳ ಹಾಕಿರಬೇಕು. ಹಾಲನ್ನು ಸಂಘಕ್ಕೆ ಬೇಗನೆ ಕೊಂಡೊಯ್ದರೇನೇ ಹಾಲು ಚೆನ್ನಾಗಿರುತ್ತದೆ.



ಹಾಲಿನ ಪಾತ್ರೆಗಳನ್ನು ಒಣಗಿಸಲು ಅವುಗಳನ್ನು ತೊಳೆದು ಬೋರಲು ಹಾಕಬೇಕು


ಈ ಹಾಲಿನ ಕಥೆಯನ್ನು ಕೇಳಿದ ನಂತರ ಬನವಾರಿ ಮತ್ತು ರಾಧಾ, ಗಂಗಾ ತೋರಿಸಿದ ಮಾರ್ಗದಂತೆ ನಡೆಯತೊಡಗಿದರು. ಮೊದಲಾಗಿ, ಡೈರಿಯ ಜಾನುವಾರುಗಳಿಗೆ ಔಷದೋಪಚಾರ ನಡೆಸುವ ಪಶುವೈದ್ಯರ ಕೈಯಲ್ಲಿ ಗಂಗೆಗೆ ಉಪಚಾರ ನೀಡಲಾಯ್ತು. ಸೂಕ್ತ ಚಿಕಿತ್ಸೆ ದೊರಕಿದ ಕಾರಣ ಗಂಗೆ ಬೇಗನೆ ಚೇತರಿಸಿಕೊಂಡಿತು. ಗಂಗೆ ತಿಳಿಸಿದ ಪ್ರತಿಯೊಂದು ಮಾತನ್ನೂ ರಾಧಾ ಚೆನ್ನಾಗಿ ಪಾಲಿಸಿದಳು. ಗಂಗೆ, ಜಮುನೆಯರ ಕೊಟ್ಟಿಗೆ ಮತ್ತು ಆಸುಪಾಸಿನ ಪರಿಸರವನ್ನು ರಾಧಾ ಮತ್ತು ಮಕ್ಕಳು ಕೂಡಿ ಸ್ವಚ್ಛಗೊಳಿಸಿದರು.



ಗಂಗೆಗೆ ಚಿಕಿತ್ಸೆ ದೊರೆಯಿತು, ಬನವಾರಿಯ ಮನೆಯಲ್ಲಿ ಮತ್ತೆ ಸುಖ, ಸಮೃದ್ಧಿ ಮರಳಿತು


ಇದರಿಂದಾಗಿ ಗಂಗೆ ಸ್ವಚ್ಛ ಹಾಗೂ ಹೆಚ್ಚು ಪ್ರಮಾಣದಲ್ಲಿ ಹಾಲು ನೀಡಲಾರಂಭಿಸಿತು. ಬನವಾರಿಯ ಕುಟುಂಬದ ಆದಾಯ ಹೆಚ್ಚಾಗಿ ಅವರು ಮತ್ತೆ ಮೊದಲಿನಂತೆ ಸಂತೋಷದಿಂದ ಇರಲಾರಂಭಿಸಿದರು. ಆಗ ಬನವಾರಿ ಮತ್ತು ರಾಧಾ ಹಾಲು ಕರೆಯುವ ಇನ್ನಷ್ಟು ಪಶುಗಳನ್ನು ಮನೆಗೆ ಬರಮಾಡಿಕೊಳ್ಳುವ ಯೋಜನೆ ಹಾಕಿಕೊಳ್ಳಲಾರಂಭಿಸಿದರು.

ಸ್ವಚ್ಛ, ಶುಭ್ರ, ರೋಗರಹಿತ ಪಶು




(1)

ಪಶುಗಳ ಸ್ವಚ್ಛ, ಶುಭ್ರ ಕೊಟ್ಟಿಗೆ




(2)

ಸ್ವಚ್ಛ ಕುಡಿಯುವ ನೀರು




(3)

ಸ್ವಚ್ಛ, ಶುಭ್ರ ಸ್ಟೇನ್‌ಲೆಸ್ ಸ್ಟೀಲ್‌ನ ಪಾತ್ರೆಗಳು




(4)

ಹಾಲು ಕರೆಯುವ ಮೊದಲು ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳಬೇಕು





(5)

ಕೆಚ್ಚಲನ್ನು ಸ್ವಚ್ಛ ನೀರಿನಿಂದ ತೊಳೆದು ಒಗೆದ, ಸ್ವಚ್ಛ ಬಟ್ಟೆಯಿಂದ ಒರಸಬೇಕು



(6)

ಹಾಲು ಕರೆಯುವಾಗ ಆರಂಭದಲ್ಲಿ ಪ್ರತೀ ತೊಟ್ಟಿನಿಂದ ಒಂದೆರಡು ಧಾರೆ ಹಾಲನ್ನು ಹೊರಚೆಲ್ಲಿರಿ




(7)

ಸ್ವಚ್ಛ, ಶುಭ್ರ, ರೋಗರಹಿತ ಹಾಲು ಕರೆಯುವ ವ್ಯಕ್ತಿ



(8)

ಹಾಲು ಕರೆಯುವ ಸಮಯದಲ್ಲಿ ಪಶುವಿಗೆ ಹಸಿರು ಹುಲ್ಲನ್ನು ಮಾತ್ರ ತಿನ್ನಿಸಬಹುದು



(9)

ಹಾಲು ಕರೆದಾದ ನಂತರ ಕೆಚ್ಚಲನ್ನು ಸ್ವಚ್ಛವಾದ ನೀರಿನಿಂದ ತೊಳೆಯಬೇಕು ಹಾಗೂ ಕ್ರಿಮಿನಾಶಕ ಮಿಶ್ರಣದಲ್ಲಿ ಮುಳುಗಿಸಬೇಕು





(10)

ಹಾಲಿನ ಪಾತ್ರೆಗೆ ಸೂಕ್ತ ಮುಚ್ಚಳ ಮುಚ್ಚಿ ಸಂಘಕ್ಕೆ ಶೀಘ್ರ ತಲುಪಿಸಬೇಕು




(11)

ಹಾಲನ್ನು ಶೀಘ್ರ ತಂಪಾಗಿಸುವ ಯಂತ್ರ



(12)

All rights reserved. No part of this publication may be reproduced in any form, electronic or mechanical without prior written permission from National Dairy Development Board, Anand (India).



## ಸಂಗೀತ ಕೇಳಿ ಹಸು ಹೆಚ್ಚು ಹಾಲು
## ನೀಡುವ ಆಶ್ಚರ್ಯ ಕೇಳಿರುವಿರೇನು ?

ಪುರಾಣಗಳು ಸಂಗೀತವನ್ನು ದೈವೀಸ್ವರೂಪವೆಂದು ಕೊಂಡಾಡಿವೆ. ಎಂತಹ ದೊಡ್ಡ ರೋಗವನ್ನಾದರೂ ಸಂಗೀತದ ಶಕ್ತಿಯಿಂದ ಗುಣಪಡಿಸಬಹುದೆಂದು ಆಯುರ್ವೇದ ಒತ್ತಿ ಹೇಳುತ್ತದೆ. ಪ್ರಾಣಿಗಳೂ ಸಂಗೀತದ ಆನಂದಾನುಭವ ಪಡೆಯುತ್ತವೆಂದು ಸಂಶೋಧನೆ ತಿಳಿಸುತ್ತದೆ.

ಸಂಗೀತ ನುಡಿಸುವುದರಿಂದ ಹಸು/ಎಮ್ಮೆಗಳಿಗೆ ಆರಾಮದ ಅನುಭವವಾಗುತ್ತದೆ.

ಹಾಲು ಕರೆಯುವಾಗ ಮಧುರ ಸಂಗೀತ ನುಡಿಸಿರಿ ಹಾಗೂ ಅದರ ಪ್ರಭಾವ ಪ್ರತ್ಯಕ್ಷ ಕಾಣಿರಿ.

'Kannada' version of the original 'Hindi' book "Doodh Ki Kahani, Gai Ki Zabani"
published by NDDB, Anand.